ಕರ್ನಾಟಕ ಸರ್ಕಾರ

(ಪೊಲೀಸ್ ಇಲಾಖೆ)

# ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರ ರವರ ನಡವಳಿಗಳು

ಉಪಸ್ಥಿತರು: ಭಾಸ್ಕರ್ ರಾವ್, ಐ.ಪಿ.ಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ.

ವಿಷಯ : ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಕೊರೋನ ವೈರಸ್ (ಕೋವಿಡ್-19) ಹರಡದಂತೆ ಮುಂಜಾಗೃತ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ದಿನಾಂಕ: 04.05.2020 ರ 00.00 ಗಂಟೆಯಿಂದ ದಿನಾಂಕ: 17-05-2020 ರ 00.00 ಗಂಟೆವರೆಗೆ ನಿಷೇದಾಜ್ಞೆಯನ್ನು ಹೊರಡಿಸಿರುವ ಬಗ್ಗೆ.

ಉಲ್ಲೇಖ : 1) ಮುಖ್ಯ ಕಾರ್ಯದರ್ಶಿಗಳು ಮತ್ತು ಅಧ್ಯಕ್ಷರು, ರಾಜ್ಯ ಕಾರ್ಯಕಾರಿಣಿ ಸಮಿತಿ, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಅವರ ಆದೇಶ ಸಂಖ್ಯೆ: ಆರ್‌ಡಿ/158/ಟಿಎನ್‌ಆರ್/2020, ದಿನಾಂಕ: 02.05.2020

2) ಗೃಹ ಮಂತ್ರಾಲಯ, ಭಾರತ ಸರ್ಕಾರ ಅವರ ಆದೇಶ ಸಂಖ್ಯೆ: 40-3/2020-ಡಿಎಂ-ಐ(ಎ), ದಿನಾಂಕ: 01.05.2020.

-----

ಪ್ರಸ್ತಾವನೆ:

ಕೋವಿಡ್-19 ವೈರಸ್ (ಸಾಂಕ್ರಾಮಿಕ ರೋಗ) ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮುಖ್ಯ ಕಾರ್ಯದರ್ಶಿಗಳು ಮತ್ತು ಅಧ್ಯಕ್ಷರು, ರಾಜ್ಯ ಕಾರ್ಯಕಾರಿಣಿ ಸಮಿತಿ, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಅವರು ಆದೇಶ ಸಂಖ್ಯೆ: ಆರ್‌ಡಿ/158/ಟಿಎನ್‌ಆರ್/2020, ದಿನಾಂಕ: 02.05.2020 ಮತ್ತು ಗೃಹ ಮಂತ್ರಾಲಯ, ಭಾರತ ಸರ್ಕಾರ ಅವರ ಆದೇಶ ಸಂಖ್ಯೆ: 40-3/2020-ಡಿಎಂ-ಐ(ಎ), ದಿನಾಂಕ: 01.05.2020 ರಲ್ಲಿ ಈ ಕೆಳಕಂಡಂತೆ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

ಸದರಿ ಮಾರ್ಗಸೂಚಿಯನ್ವಯ ಕೋವಿಡ್-19 ವೈರಾಣು ಹರಡುವಿಕೆಯ ಆಧಾರದ ಮೇಲೆ ಜಿಲ್ಲಾವಾರು ಹಸಿರು, ಕೆಂಪು ಮತ್ತು ಕಿತ್ತಳೆ ವಲಯಗಳನ್ನಾಗಿ ವಿಂಗಡಿಸಲಾಗಿರುತ್ತದೆ. ಕೋವಿಡ್-19 ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿರುವುದನ್ನು ಪರಿಗಣಿಸಿ ಕೆಂಪು ವಲಯ/ಹಾಟ್ ಸ್ಪಾಟ್ ಜಿಲ್ಲೆಯನ್ನಾಗಿ ಗುರುತಿಸಿದ್ದು, ಈ ವಲಯಗಳಲ್ಲಿ ಕೋವಿಡ್-19 ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಈ ಕೆಳಕಂಡ ನಿರ್ಬಂಧಿತ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ಮಾರ್ಗಸೂಚಿಯಲ್ಲಿ ಸೂಚಿಸಲಾಗಿರುತ್ತದೆ.

1. <u>ಪರಿಷ್ಕೃತ ಮಾರ್ಗಸೂಚಿಯನ್ವಯ ದಿನಾಂಕ: 04-05-2020 ರ 00.00 ಗಂಟೆಯಿಂದ ದಿ: 17-05-2020 ರ 00.00 ಗಂಟೆಯವರೆಗೆ ಎಲ್ಲಾ ವಲಯಗಳಲ್ಲಿಯೂ ಸಹ ಈ ಕೆಳಕಂಡ ಚಟುವಟಿಕೆಗಳನ್ನು ನಿರ್ಬಂಧಿಸಲಾಗಿದೆ.</u>

i. ಎಲ್ಲಾ ದೇಶೀಯ ಮತ್ತು ಅಂತರಾಷ್ಟ್ರೀಯ ಪ್ರಯಾಣಿಕ ವಿಮಾನಗಳ ಹಾರಾಟವನ್ನು ರದ್ದುಪಡಿಸಿದೆ. (ಗೃಹ ಮಂತ್ರಾಲಯದಿಂದ ಅನುಮತಿ ಪಡೆಯಲಾದ ವೈದ್ಯಕೀಯ ಸೇವಾ ಅಂಬುಲೆನ್ಸ್ ಮತ್ತು ಭದ್ರತೆ ಉದ್ದೇಶಗಳನ್ನು ಹೊರತುಪಡಿಸಿ)

ii. ಪ್ರಯಾಣಿಕರು ಸಂಚರಿಸುವಂತಹ ರೈಲುಗಳ ಓಡಾಟವನ್ನು ರದ್ದುಪಡಿಸಿದೆ. (ಗೃಹ ಮಂತ್ರಾಲಯದಿಂದ ಅನುಮತಿಸಲಾದ ಉದ್ದೇಶಗಳು, ಭದ್ರತಾ ಉದ್ದೇಶಗಳನ್ನು ಹೊರತುಪಡಿಸಿ)

iii. ಸಾರ್ವಜನಿಕರು ಸಂಚರಿಸುವ ಅಂತರ್‌ರಾಜ್ಯ ಬಸ್‌ಗಳ ಓಡಾಟವನ್ನು ರದ್ದುಪಡಿಸಿದೆ. (ಗೃಹ ಮಂತ್ರಾಲಯದಿಂದ ಅನುಮತಿಸಲಾದವುಗಳನ್ನು ಹೊರತುಪಡಿಸಿ)

iv. ಮೆಟ್ರೋ ರೈಲು ಸೇವೆಗಳನ್ನು ರದ್ದುಪಡಿಸಿದೆ.

v. ಅಂತರ್‌ರಾಜ್ಯಗಳ ನಡುವಿನ ವೈಯಕ್ತಿಕ ಓಡಾಟವನ್ನು ರದ್ದುಪಡಿಸಿದೆ. (ವೈದ್ಯಕೀಯ ಉದ್ದೇಶಗಳಿಗೆ ಗೃಹಮಂತ್ರಾಲಯದಿಂದ ಅನುಮತಿಸಲಾದ ಚಟುವಟಿಕೆಗಳನ್ನು ಹೊರತುಪಡಿಸಿ)

vi. ಎಲ್ಲಾ ಶಿಕ್ಷಣ ಶಾಲೆಗಳು, ಕಾಲೇಜುಗಳು, ಶಿಕ್ಷಣ/ತರಬೇತಿ/ಕೋಚಿಂಗ್ ಸಂಸ್ಥೆಗಳು ಮುಚ್ಚತಕ್ಕದ್ದು. (ಆದಾಗ್ಯೂ, ಆನ್‌ಲೈನ್/ದೂರಕಲಿಕೆಗಳಿಗೆ ಅನುಮತಿಸಿದೆ)

vii. ಆತಿಥ್ಯ ಸೇವೆಗಳು (ಮನೆಯಲ್ಲಿನ ಆರೈಕೆ/ಪೊಲೀಸ್/ ಸರ್ಕಾರಿ ಸಿಬ್ಬಂದಿಗಳು/ಆರೋಗ್ಯ ಸುರಕ್ಷಾ ಕಾರ್ಯಕರ್ತರು/ಸಿಲುಕಿಹಾಕಿಕೊಂಡಿರುವ ಪ್ರವಾಸಿಗರು/ಪ್ರತ್ಯೇಕಿಸಲಾದ ವ್ಯಕ್ತಿಗಳಿಗಾಗಿ ಉಪಯೋಗಿಸಲಾಗುತ್ತಿರುವುಗಳನ್ನು ಹೊರತುಪಡಿಸಿ)

viii. ಎಲ್ಲಾ ಚಿತ್ರಮಂದಿರಗಳು, ಶಾಪಿಂಗ್ ಮಾಲ್‌ಗಳು, ಜಿಮ್, ಕ್ರೀಡಾ ಸಂಕೀರ್ಣಗಳು, ಈಜುಕೊಳಗಳು, ಮನೋರಂಜನಾ ಉದ್ಯಾನವನಗಳು, ರಂಗಮಂದಿರಗಳು, ಬಾರ್‌ಗಳು ಮತ್ತು ಸಭಾಂಗಣಗಳು, ಸಮುದಾಯ ಭವನಗಳು ಮತ್ತು ಈ ರೀತಿಯ ಸ್ಥಳಗಳು.

ix. ಎಲ್ಲಾ ಸಾಮಾಜಿಕ/ರಾಜಕೀಯ /ಕ್ರೀಡೆ/ ಮನರಂಜನೆ /ಶೈಕ್ಷಣಿಕ/ ಸಾಂಸ್ಕೃತಿಕ/ ಧಾರ್ಮಿಕ ಕಾರ್ಯಕ್ರಮಗಳು/ಜನಸೇರುವ ಇತರೆ ಕಾರ್ಯಕ್ರಮಗಳು.

x. ಎಲ್ಲಾ ಧಾರ್ಮಿಕ ಸ್ಥಳಗಳು/ಸಾರ್ವಜನಿಕ ಪ್ರಾರ್ಥನಾ ಸ್ಥಳಗಳನ್ನು ಹಾಗೂ ಧಾರ್ಮಿಕ ಸಭೆಗಳನ್ನು ಕಡ್ಡಾಯವಾಗಿ ನಿರ್ಬಂಧಿಸಲಾಗಿದೆ.

<u>2. ವ್ಯಕ್ತಿಗಳ ಯೋಗಕ್ಷೇಮ ಮತ್ತು ಸುರಕ್ಷತೆಗಾಗಿ ಕ್ರಮಗಳು</u>

i. ರಾತ್ರಿ 7-00 ಗಂಟೆಯಿಂದ ಬೆಳಗ್ಗೆ 07-00 ಗಂಟೆಯವರೆಗೆ ಅನವಶ್ಯಕ ಚಟುವಟಿಕೆಗಳಿಗೆ ಸಂಬಂಧಿಸಿದ ವೈಯಕ್ತಿಕ ಓಡಾಟಗಳನ್ನು ಕಡ್ಡಾಯವಾಗಿ ನಿಷೇಧಿಸಿದೆ.

ii. 65 ವರ್ಷ ಮೇಲ್ಪಟ್ಟ ವ್ಯಕ್ತಿಗಳು, ಅಸ್ವಸ್ಥಗೊಂಡವರು, ಗರ್ಭಿಣಿ ಸ್ತ್ರೀಯರು ಮತ್ತು 10 ವರ್ಷದ ಒಳಗಿನ ಮಕ್ಕಳು ಕಡ್ಡಾಯವಾಗಿ ಮನೆಯಲ್ಲಿಯೇ ಇರತಕ್ಕದ್ದು. (ರಾಷ್ಟ್ರೀಯ ನಿರ್ದೇಶನಗಳನ್ವಯ ಸಭೆಗಳಿಗೆ ಅಗತ್ಯ ಅವಶ್ಯಕತೆಗಳನ್ನು ಪೂರೈಸುವುದು ಮತ್ತು ಆರೋಗ್ಯ ಉದ್ದೇಶಕ್ಕಾಗಿ ಹೊರತುಪಡಿಸಿ)

iii. ನಿರ್ಬಂಧಿತ ವಲಯಗಳಲ್ಲಿ ಹೊರರೋಗಿ ವಿಭಾಗ (ಓಪಿಡಿ) ಗಳು ಮತ್ತು ವೈದ್ಯಕೀಯ ಕ್ಲಿನಿಕ್‌ಗಳ ಕಾರ್ಯ ಚಟುವಟಿಕೆಗಳಿಗೆ ಕಡ್ಡಾಯವಾಗಿ ಅನುಮತಿಸತಕ್ಕದ್ದಲ್ಲ. (ಆದಾಗ್ಯೂ ಕೆಂಪು, ಕಿತ್ತಳೆ ಮತ್ತು ಹಸಿರು ವಲಯಗಳಲ್ಲಿ ಸಾಮಾಜಿಕ ಅಂತರದ ನಿಯಮಗಳು ಮತ್ತು ಇತರೆ ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ಕೈಗೊಳ್ಳುವ ಮೂಲಕ ಅನುಮತಿಸಬಹುದು).

3. <u>ನಿರ್ಬಂಧಿತ ವಲಯಗಳಲ್ಲಿ ಕಾರ್ಯಚಟುವಟಿಕೆಗಳು :</u>

i. ಕಟ್ಟು ನಿಟ್ಟಿನ ಪರಿಧಿಯ ನಿಯಂತ್ರಣ

ii. ಪ್ರವೇಶ ಮತ್ತು ನಿರ್ಗಮನದ ಸ್ಥಳಗಳನ್ನು ಸ್ಥಾಪಿಸುವುದು.

iii. ಸರಕು ಮತ್ತು ಸೇವೆಗಳ ಪೂರೈಕೆ ಮಾಡುವ, ವೈದ್ಯಕೀಯ ತುರ್ತು ಸೇವೆ ಒದಗಿಸುವ ವ್ಯಕ್ತಿಗಳ ಓಡಾಟಕ್ಕೆ ಮಾತ್ರ ಅನುಮತಿಸುವುದು.

iv. ಯಾವುದೇ ಜನರು ಮತ್ತು ಸಾರಿಗೆಯನ್ನು ಪರಿಶೀಲಿಸದೇ ಒಳಗೆ ಬಿಡುವಂತಿಲ್ಲ.

v. ಪರಿಧಿಯಿಂದ ಒಳಗೆ ಮತ್ತು ಹೊರಗೆ ಚಲಿಸುವ ಜನರ ವಿವರಗಳನ್ನು ದಾಖಲಿಸುವುದು.

5. <u>ಕೆಂಪು ವಲಯಗಳಲ್ಲಿನ ಕಾರ್ಯಚಟುವಟಿಕೆಗಳು (ಹಾಟ್‌ಸ್ಪಾಟ್) (ನಿರ್ಬಂಧಿತ ವಲಯಗಳ ಹೊರಗೆ)</u>

i. **ಮೇಲ್ಕಂಡಂತೆ ನಿರ್ಬಂಧಿಸಲಾದ ಕಾರ್ಯಚಟುವಟಿಕೆಗಳನ್ನು ಹೊರತುಪಡಿಸಿ ಈ ಕೆಳಕಂಡ ಚಟುವಟಿಕೆಗಳಿಗೆ ಕಡ್ಡಾಯವಾಗಿ ಅನುಮತಿಸತಕ್ಕದಲ್ಲ.**

a) ಸೈಕಲ್ ರಿಕ್ಷಾಗಳು ಮತ್ತು ಆಟೋರಿಕ್ಷಾಗಳು

b) ಟ್ಯಾಕ್ಸಿಗಳು ಮತ್ತು ಕ್ಯಾಬ್ ಸೇವೆಗಳು

c) ಜಿಲ್ಲೆಗಳ ಒಳಗಡೆ ಹಾಗೂ ಹೊರಗೆ ಬಸ್ಸುಗಳ ಓಡಾಟ

d) ಕ್ಷೌರದ ಅಂಗಡಿಗಳು, ಸ್ಪಾ ಮತ್ತು ಸಲೂನ್‌ಗಳು

ii. **ಈ ಕೆಳಕಂಡ ಕಾರ್ಯಚಟುವಟಿಕೆಗಳನ್ನು ನಿರ್ದಿಷ್ಟಪಡಿಸಲಾದ ನಿಬಂಧನೆಗಳಗೊಳಪಟ್ಟು ಅನುಮತಿಸಬಹುದಾಗಿದೆ.**

a) ಪ್ರಯಾಣಿಕರು ಹಾಗೂ ವಾಹನಗಳ ಓಡಾಟ: ನಾಲ್ಕು ಚಕ್ರದ ವಾಹನಗಳಲ್ಲಿ ಚಾಲಕ ಹಾಗೂ ಆತನ ಜೊತೆಗೆ ಇಬ್ಬರು ಪ್ರಯಾಣಿಕರಿಗೆ ಅವಕಾಶ ಹಾಗೂ ದ್ವಿಚಕ್ರ ವಾಹನಗಳಲ್ಲಿ ಹಿಂಬದಿ ಸವಾರನು ಪ್ರಯಾಣಿಸುವಂತಿಲ್ಲ.

b) ನಗರ ಪ್ರದೇಶಗಳಲ್ಲಿ ಕೈಗಾರಿಕಾ ಘಟಕಗಳು; ವಿಶೇಷ ಆರ್ಥಿಕ ವಲಯಗಳಲ್ಲಿ (SEZ), ರಫ್ತು ಆಧಾರಿತ ಘಟಕಗಳು (EOUs), ಕೈಗಾರಿಕಾ ಪ್ರದೇಶಗಳು ಮತ್ತು ಪಟ್ಟಣಗಳಲ್ಲಿ ಮಾತ್ರ ಪ್ರವೇಶ ನಿಯಂತ್ರಣದೊಂದಿಗೆ ಅಗತ್ಯ ವಸ್ತುಗಳ ಉತ್ಪಾದನಾ ಘಟಕಗಳು, ಔಷಧಿಗಳು, ವೈದ್ಯಕೀಯ ಉಪಕರಣಗಳು, ಅವುಗಳಿಗೆ ಸಂಬಂಧಿಸಿದ ಪೂರಕ ಸರಕುಗಳು ಸೇರಿದಂತೆ ಪೂರೈಕೆ ಸರಪಳಿ; ಐಟಿ, ಹಾರ್ಡ್‌ವೇರ್ ಉತ್ಪಾದನೆಗಳು; ಸೆಣಬು ಕೈಗಾರಿಕೆಗಳು (ಪಾಳಿ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಮೂಲಕ) ಮತ್ತು ಪ್ಯಾಕಿಂಗ್ ಘಟಕಗಳಿಗೆ ಅನುಮತಿಸಿದೆ.
ಗ್ರಾಮೀಣ ಭಾಗದಲ್ಲಿ ಎಲ್ಲಾ ಕೈಗಾರಿಕಾ ಚಟುವಟಿಕೆಗಳನ್ನು ಅನುಮತಿಸಿದೆ.

c) ನಗರ ಪ್ರದೇಶಗಳಲ್ಲಿನ ನಿರ್ಮಾಣ ಕಾಮಗಾರಿಗಳು (ಹೊರಗಿನಿಂದ ಕಾರ್ಮಿಕರನ್ನು ಕರೆತರದೆ ಕಾಮಗಾರಿ ಸ್ಥಳದಲ್ಲಿ ಲಭ್ಯವಿರುವ ಕಾರ್ಮಿಕರನ್ನೇ ಬಳಸುವುದು. ನವೀಕರಿಸಬಹುದಾದ ಇಂಧನದ ಯೋಜನೆಗಳಿಗೆ ಸಂಬಂಧಿಸಿದ ನಿರ್ಮಾಣ ಕಾಮಗಾರಿಗಳು; ಗ್ರಾಮೀಣ ಭಾಗದಲ್ಲಿ ಎಲ್ಲಾ ನಿರ್ಮಾಣ ಚಟುವಟಿಕೆಗಳನ್ನು ಅನುಮತಿಸಿದೆ.

**d)** ನಗರ ಪ್ರದೇಶದಲ್ಲಿನ ಎಲ್ಲಾ ಮಾಲ್‌ಗಳು, ಮಾರುಕಟ್ಟೆ ಸಂಕೀರ್ಣಗಳು ಕಡ್ಡಾಯವಾಗಿ ಮುಚ್ಚತಕ್ಕದ್ದು. (ಆದಾಗ್ಯೂ ಮಾರುಕಟ್ಟೆ ಹಾಗೂ ಮಾರುಕಟ್ಟೆ ಸಂಕೀರ್ಣಗಳಲ್ಲಿ ಅಗತ್ಯ ವಸ್ತುಗಳ ಮಾರಾಟದ ಮಳಿಗೆಗಳಿಗೆ ಅನುಮತಿಸಿದೆ)

ನಗರ ಪ್ರದೇಶಗಳಲ್ಲಿನ ಅಗತ್ಯ ಹಾಗೂ ಅಗತ್ಯವಲ್ಲದ ಯಾವುದೇ ಸರಕುಗಳನ್ನು ಮಾರಾಟ ಮಾಡುವ ಎಲ್ಲಾ ಒಂಟಿ ಮಳಿಗೆಗಳು, ಅಕ್ಕ-ಪಕ್ಕದ ಮಳಿಗೆಗಳು ಹಾಗೂ ವಸತಿ ಸಮುಚ್ಛಯಗಳಲ್ಲಿನ ಮಳಿಗೆಗಳಿಗೆ ಅನುಮತಿಸಿದೆ.

ಗ್ರಾಮೀಣ ಪ್ರದೇಶ ವ್ಯಾಪ್ತಿಯಲ್ಲಿನ (ಮಾಲ್‌ಗಳನ್ನು ಹೊರತುಪಡಿಸಿ) ಅಗತ್ಯ ಹಾಗೂ ಅಗತ್ಯವಲ್ಲದ ಯಾವುದೇ ಸರಕುಗಳನ್ನು ಮಾರಾಟ ಮಾಡುವ ಅಂಗಡಿಗಳಿಗೆ ಅನುಮತಿಸಿದೆ.

(ಮೇಲಿನ ಎಲ್ಲಾ ಪ್ರಕರಣಗಳಲ್ಲಿ ಸಾಮಾಜಿಕ ಅಂತರವನ್ನು ಕಟ್ಟುನಿಟ್ಟಾಗಿ ಪಾಲಿಸುವುದು)

**e)** ಅಗತ್ಯ ಸರಕುಗಳಿಗೆ ಸಂಬಂಧಿಸಿದಂತೆ ಇ-ಕಾಮರ್ಸ್ ಚಟುವಟಿಕೆಗಳಿಗೆ ಅನುಮತಿಸಿದೆ.

**f)** ಖಾಸಗಿ ಕಛೇರಿಗಳು (ಅಗತ್ಯವಿರುವ ಸಿಬ್ಬಂದಿಗಳ ಪೈಕಿ ಶೇ.33% ರಷ್ಟು ಸಿಬ್ಬಂದಿ ಕಛೇರಿಯಲ್ಲಿ ಹಾಗೂ ಇನ್ನುಳಿದ ಸಿಬ್ಬಂದಿಗಳು ಮನೆಯಿಂದಲೇ ಕಾರ್ಯನಿರ್ವಹಿಸುವುದು)

**g)** ಎಲ್ಲಾ ಸರ್ಕಾರಿ ಕಛೇರಿಗಳು ಕಡ್ಡಾಯವಾಗಿ ಕಾರ್ಯನಿರ್ವಹಿಸುವುದು; ದಿ: 02-05-2020 ರ ವಿಂಗಡನೆಯಂತೆ ಬೆಂಗಳೂರು ನಗರದ ಕೆಂಪು ವಲಯದಲ್ಲಿ ಬರುವ ಸ್ಥಳಗಳಲ್ಲಿ ರಾಜ್ಯ ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 123 ಡಿಬಿಎಂ2020 (ಭಾಗ), ದಿನಾಂಕ: 18-04-2020 ಹಾಗೂ ತಿದ್ದುಪಡಿ ಸುತ್ತೋಲೆ ದಿನಾಂಕ: 20-04-2020 ಗಳಲ್ಲಿ ಪ್ರಸ್ತಾಪಿಸಿರುವ ಅತ್ಯಗತ್ಯ ಸೇವೆಗಳನ್ನು ಒದಗಿಸುತ್ತಿರುವ ಇಲಾಖೆಗಳಲ್ಲಿ ಶೇ.100 ರಷ್ಟು ಗ್ರೂಪ್ ಎ, ಬಿ, ಸಿ ಮತ್ತು ಡಿ ವೃಂದದ ಅಧಿಕಾರಿ/ಸಿಬ್ಬಂದಿಗಳು ಕರ್ತವ್ಯಕ್ಕೆ ಹಾಜರಾಗಲು ಅನುಮತಿಸಿದೆ. ಉಳಿದ ಇಲಾಖೆಗಳಲ್ಲಿನ ಗ್ರೂಪ್ ಎ ಮತ್ತು ಬಿ ವೃಂದದ ಎಲ್ಲಾ ಅಧಿಕಾರಿಗಳು ಹಾಗೂ ಗ್ರೂಪ್ ಸಿ ಮತ್ತು ಡಿ ವೃಂದದ ಶೇ.33 ರಷ್ಟು ಸಿಬ್ಬಂದಿಗಳು ಕರ್ತವ್ಯಕ್ಕೆ ಹಾಜರಾಗಲು ಅನುಮತಿಸಿದೆ.

5. ಇತರೆ ಎಲ್ಲಾ ಚಟುವಟಿಕೆಗಳನ್ನು ಅನುಮತಿಸುವುದು. ಈ ಮಾರ್ಗಸೂಚಿಯಂತೆ ನಿರ್ಬಂಧಿತ ವಲಯಗಳಲ್ಲಿ ನಿಷೇದಿಸಲ್ಪಟ್ಟಿರುವುಗಳನ್ನು ಹೊರತುಪಡಿಸಿ, ರಾಜ್ಯ ಸರ್ಕಾರವು ಪರಿಸ್ಥಿತಿಯನ್ನು ಅವಲೋಕಿಸಿ ಆಯ್ದ ಚಟುವಟಿಕೆಗಳಿಗೆ ಅಗತ್ಯ ನಿಬಂಧನೆಗಳೊಂದಿಗೆ ಅನುಮತಿಸಬಹುದಾದ ಎಲ್ಲಾ ಚಟುವಟಿಕೆಗಳು.

6. ಹೊರ ರಾಜ್ಯಗಳಿಗೆ ಸಂಬಂಧಪಟ್ಟ ಎಲ್ಲಾ ಸರಕು ವಾಹನಗಳಿಗೆ (ಖಾಲಿ ಸರಕು ವಾಹನಗಳು ಸೇರಿದಂತೆ) ರಾಜ್ಯದ ಎಲ್ಲಾ ಜಿಲ್ಲೆಗಳ ಪ್ರವೇಶಕ್ಕೆ ಅನುಮತಿಸಿದೆ.

7. ನೆರೆ ರಾಷ್ಟ್ರಗಳೊಂದಿಗಿನ ವ್ಯಾಪಾರ ಒಪ್ಪಂದಗಳಡಿಯಲ್ಲಿ ಬರುವ ಎಲ್ಲಾ ರೀತಿಯ ಸರಕು ಸಾಗಾಣಿಕೆ ವಾಹನಗಳ ಓಡಾಟಕ್ಕೆ ಯಾವುದೇ ರೀತಿಯ ನಿರ್ಬಂಧವಿರುವುದಿಲ್ಲ.

8. ದಿನಾಂಕ: 03.05.2020 ರವರೆಗೆ ಹೊರಡಿಸಿರುವ ಮಾರ್ಗಸೂಚಿಯಡಿಯಲ್ಲಿ ಈಗಾಗಲೇ ಅನುಮತಿಸಲಾಗಿರುವ ಚಟುವಟಿಕೆಗಳಿಗೆ ಹೊಸದಾಗಿ ಅನುಮತಿ ಪಡೆಯಬೇಕಾಗಿರುವುದಿಲ್ಲ.

***ಈ ಕೆಳಕಂಡಂತೆ ಹೊರಡಿಸಿರುವ SOP ಅನ್ವಯ ಕಾರ್ಯಾಚರಣೆಗಳು ಮುಂದುವರೆಯುತ್ತವೆ.***

i. ದೇಶದಲ್ಲಿನ ವಿದೇಶಿ ಪ್ರಜೆಗಳನ್ನು ಕಳುಹಿಸಿಕೊಡುವ ಹಾಗೂ ಪ್ರತ್ಯೇಕಿಸಲಾದ ವ್ಯಕ್ತಿಗಳನ್ನು ಬಿಡುಗಡೆಗೊಳಿಸುವ ಸಂಬಂಧ (ಆದೇಶ ಸಂಖ್ಯೆ ದಿನಾಂಕ: 02-04-2020)

ii. ರಾಜ್ಯಗಳಲ್ಲಿ ವಲಸೆ/ಸಿಲುಕಿಕೊಂಡಿರುವ ಕಾರ್ಮಿಕರ ಸಂಚಾರಕ್ಕೆ ಸಂಬಂಧಿಸಿದಂತೆ (ಆದೇಶ ಸಂಖ್ಯೆ ದಿನಾಂಕ: 19-04-2020)

iii. ಭಾರತೀಯ ನೌಕಾಯಾನದ ಪ್ರಯಾಣಿಕರ ಸಂಬಂಧ (ಆದೇಶ ಸಂಖ್ಯೆ ದಿನಾಂಕ: 21-04-2020)

iv. ವಲಸೆ ಕಾರ್ಮಿಕರು, ಯಾತ್ರಿಕರು, ಪ್ರವಾಸಿಗರು, ವಿದ್ಯಾರ್ಥಿಗಳು ಮತ್ತು ಇತರೆ ವ್ಯಕ್ತಿಗಳ ಪ್ರಯಾಣದ ಬಗ್ಗೆ (ಆದೇಶ ಸಂಖ್ಯೆ ದಿನಾಂಕ: 29-04-2020)

v. ವಲಸೆ ಕಾರ್ಮಿಕರು, ಯಾತ್ರಿಕರು, ಪ್ರವಾಸಿಗರು, ವಿದ್ಯಾರ್ಥಿಗಳು ಮತ್ತು ಇತರೆ ವ್ಯಕ್ತಿಗಳ ರೈಲು ಪ್ರಯಾಣದ ಬಗ್ಗೆ (ಆದೇಶ ಸಂಖ್ಯೆ ದಿನಾಂಕ: 01-05-2020).

**ಆದೇಶ ಸಂಖ್ಯೆ ಎಸ್.ಬಿ/ಗು.ವಾ/ನಿಷೇದಾಜ್ಞೆ/15/2020 ದಿನಾಂಕ : 03.05.2020**

ಈ ದಿಸೆಯಲ್ಲಿ ಭಾಸ್ಕರ್ ರಾವ್, ಐಪಿಎಸ್, ಪೋಲೀಸ್ ಆಯುಕ್ತರು, ಬೆಂಗಳೂರು ನಗರ ಆದ ನಾನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 144(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೊರೋನ ವೈರಸ್ (ಕೋವಿಡ್-19) ಸ್ಪೋಟ ಮತ್ತು ಸೋಂಕು ಹರಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಮೇಲಿನಂತೆ ಹೊರಡಿಸಿರುವ ನಿರ್ಬಂಧಿತ ಕ್ರಮಗಳನ್ನು ಬೆಂಗಳೂರು ನಗರ ಪೋಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಕಟ್ಟುನಿಟ್ಟಾಗಿ ಜಾರಿಗೊಳಿಸುವ ಉದ್ದೇಶದಿಂದ ಈ ಕೆಳಕಂಡಂತೆ ಪ್ರತಿಬಂಧಕಾಜ್ಞೆಯನ್ನು ಹೊರಡಿಸಿರುತ್ತೇನೆ.

ಯಾವುದೇ ವ್ಯಕ್ತಿ ಈ ಮೇಲಿನ ನಿಯಂತ್ರಣ ಕ್ರಮಗಳನ್ನು ಉಲ್ಲಂಘಿಸಿದಲ್ಲಿ ಅಂತಹವರ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆ 2005 ರ ಕಲಂ. 51 ರಿಂದ 60 ರ ಜೊತೆಗೆ ಭಾರತೀಯ ದಂಡ ಸಂಹಿತೆ ಕಲಂ. 188 ರೀತ್ಯಾ ಕಾನೂನು ಕ್ರಮ ಜರುಗಿಸಲಾಗುವುದು.

ಮೇಲ್ಕಂಡ ನಿಯಂತ್ರಣ ಕ್ರಮಗಳು ದಿನಾಂಕ: 04.05.2020 ರ 00.00 ಗಂಟೆಯಿಂದ ದಿನಾಂಕ: 17-05-2020 ರ 00.00 ಗಂಟೆವರೆಗೆ ಜಾರಿಯಲ್ಲಿರುತ್ತದೆ. ಅತ್ಯಗತ್ಯವಲ್ಲದ ಚಟುವಟಿಕೆಗಳಿಗೆ ಪ್ರತಿದಿನ ಸಂಜೆ 07-00 ಗಂಟೆಯಿಂದ ಬೆಳಗ್ಗೆ 07-00 ಗಂಟೆಯವರೆಗೆ ಅನ್ವಯವಾಗುವಂತೆ ಜಾರಿಯಲ್ಲಿರುತ್ತವೆ.

ಈ ನಿರ್ಬಂಧಗಳು ಹಾಗೂ ವಿನಾಯಿತಿಗಳು ಸೇರಿದಂತೆ ಈ ಸಂಬಂಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಗಾಗ್ಗೆ ಹೊರಡಿಸುವ ಆದೇಶಗಳು ಹಾಗೂ ವಿನಾಯಿತಿಗಳು ಈ ಪ್ರತಿಬಂಧಕಾಜ್ಞೆಗೆ ಒಳಪಡುತ್ತವೆ.

ಈ ಆದೇಶದಿಂದ ಯಾವುದೇ ವ್ಯಕ್ತಿ ಬಾಧಿತನಾಗಿದ್ದರೆ, ಈ ಆದೇಶದ ಬದಲಾವಣೆ/ಮಾರ್ಪಾಡಿಗೆ ಈ ಕಛೇರಿಯೆದರು ದಂಡ ಪ್ರಕ್ರಿಯ ಸಂಹಿತೆ ಕಲಂ 144(5) ರಡಿ ಅಥವಾ ದಂಡ ಪ್ರಕ್ರೀಯ ಸಂಹಿತೆ ಕಲಂ 144(6) ಮಾನ್ಯ ಘನ ಕರ್ನಾಟಕ ಸರ್ಕಾರದೆದುರು ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.

ಈ ಆದೇಶದ ನಡವಳಿಯನ್ನು ನನ್ನ ಸಹಿ ಮತ್ತು ನನ್ನ ಕಛೇರಿಯ ಮೊಹರಿನಲ್ಲಿ 2020 ರ ಮೇ ಮಾಹೆಯ ದಿನಾಂಕ 03 ರಂದು ಹೊರಡಿಸಲಾಗಿದೆ.

ಈ ಆದೇಶವನ್ನು ಕರ್ನಾಟಕ ಘನ ಸರ್ಕಾರದ ಸನ್ನಿಧಿಗೆ ಸಲ್ಲಿಸಲಾಗಿದೆ.

SEAL OF THE COMMISSIONER OF POLICE AND DISTRICT MAGISTRATE BANGALORE CITY.

( ಭಾಸ್ಕರ್ ರಾವ್ )
ಪೋಲೀಸ್ ಆಯುಕ್ತರು ಹಾಗೂ
ಅಪರ ಜಿಲ್ಲಾ ದಂಡಾಧಿಕಾರಿಗಳು
ಬೆಂಗಳೂರು ನಗರ.

ಪೊಲೀಸ್ ಆಯುಕ್ತರು
ಬೆಂಗಳೂರು ನಗರ

ಗೆ,

1. ಸಂಕಲನಕಾರರು (Compiler), ಕರ್ನಾಟಕ ರಾಜ್ಯ ಪ್ರಪತ್ರ, ಬೆಂಗಳೂರು ರವರು ಈ ಆದೇಶವನ್ನು ವಿಶೇಷ ಕರ್ನಾಟಕ ರಾಜ್ಯ ಪತ್ರದಲ್ಲಿ ಕೂಡಲೇ ಪ್ರಕಟಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಕೋರಲಾಗಿದೆ.
2. ಸಂಬಂಧಪಟ್ಟವರಿಗೆ

<u>ಪ್ರತಿಯನ್ನು:</u>

1. ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ ಎಲ್ಲಾ ಹೆಚ್ಚುವರಿ ಪೊಲೀಸ್ ಆಯುಕ್ತರುಗಳು
2. ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ ಎಲ್ಲಾ ಜಂಟಿ ಪೊಲೀಸ್ ಆಯುಕ್ತರುಗಳು
3. ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ ಎಲ್ಲಾ ಉಪ ಪೊಲೀಸ್ ಆಯುಕ್ತರುಗಳು
4. ಸಹಾಯಕ ಪೊಲೀಸ್ ಆಯುಕ್ತರು, ನಗರ ನಿಯಂತ್ರಣ ಕೋಣೆ, ಬೆಂಗಳೂರು ನಗರ.

<u>ಪ್ರತಿಯನ್ನು ಅಭಿನಂದನೆಗಳೊಂದಿಗೆ:</u>

1. ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ, ಬೆಂಗಳೂರು.
2. ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ರಾಜ್ಯ ಗುಪ್ತವಾರ್ತೆ, ಕರ್ನಾಟಕ ರಾಜ್ಯ, ಬೆಂಗಳೂರು.
3. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
4. ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು.